SRI RAMAKRISHNA VIDYASHALA, MYSURU

# ***Admission Instructions for VIII standard during 2022—23***
## ***Annexe to Prospectus***

## Eligibility:

Vidyashala is a fully residential composite pre-university college for boys having classes from VIII to X and PUC. Admissions are open only to VIII standard (for boys only). Repeaters are not allowed. There is no provision for advance reservation.

## Application:

1. Applications forms A & B, fee structure (Appendix 'C' to Prospectus) and syllabus for admission tests in Science, Mathematics & General English are issued with the Prospectus.
2. While submitting the application, a registration fee of ***Rs.350/-*** is to be paid either in cash or through bank draft (DD). The prospectus number must be mentioned clearly on the back of the DD. Postal orders, MO and cheques are not accepted.
3. **The last date for receipt of duly filled in application is 9th April**. A ***recent*** passport size photo of the candidate is to be affixed to the application.
4. Applicants under various categories like SC, ST, OBC etc., have to attach the necessary supporting certificates. Otherwise they will be treated as applicants under general category.
5. A copy of the marks card of VII std Annual Examination & copies of the certificates of co-curricular activities in VI & VII std have to be submitted along with the application. If VII std results are yet to be declared, a copy of the marks card of first term (mid-term) of VII std has to be produced. In such cases the annual examination marks card has to be produced at the time of interview.

## Syllabus:

The institution follows the curriculum & examination as prescribed by the Department of Education, Karnataka. The medium of instruction is English. Sanskrit / Kannada / Hindi is provided under first language. Study of Kannada as first or third language is mandatory for all. However, Kannada will be taught from basics for those who have not studied Kannada. Non-Karnataka students must be able to read and write Hindi or Sanskrit as they have to opt one of them as first language.

## Admission procedure:

1. Admission is based on written tests in Science & Mathematics of VII std level and general English (for which the syllabi is provided along with the Prospectus), a medical examination and an interview. The candidates may take the tests either in English or in Kannada medium.

2. Admission tests will be held between 17th and 21st of April in batches – morning batch 7.30 am to 1.00 pm and afternoon batch from 12.30 pm to 6.00 pm. The actual date and time of the tests allotted to the candidate will be intimated on receipt & registration of the filled-in application.

***Ph: 0821-2417555 / 2514000 / 2516000*** ***E-mail: vidyashala@gmail.com***

3. The list of selected candidates will be notified on 22nd April around 5.30 pm and the first instalment of fee must be remitted before 30th April, otherwise the seat will be forfeited. Selected candidates have to get admitted to the school between 2nd and 4th of June at the time and date specified in the endorsement (given to the selected candidates).

4. Lunch/refreshments will be provided to the candidates on the day of the test.

**Annual charges:**

The annual charges including boarding and other fees will be approximately l,50,000/- to be paid in three instalments (April, July & September). In addition a deposit of Rs.30,000/- is to be made to cover expenses on books, stationery and articles mentioned under Appendix A and B of the prospectus and other sundry expenses. Details of the fees and other charges are provided in Appendix 'C' to the prospectus.

Parents will make the candidates aware that the routine of the day starts at 5.05 am & comes to close at 10.30 pm. To avoid withdrawal after admission, parents are advised to take the consent of the candidate and other family members.

**For Scholarship Applicants only:**

Only a few Vidyashala scholarships are available for merited economically backward candidates. Those who apply for scholarship must collect the details and the **prescribed scholarship application form** along with the Prospectus. Application without this duly filled-in form will be rejected.

**A careful study of Prospectus will avoid unnecessary correspondence.**

All correspondence shall be addressed to

**The Correspondent, *Sri Ramakrishna Vidyashala, Yadavagiri, Mysuru-570020***

***Correspondent***

# 2022–23ನೇ ಸಾಲಿನ 8ನೇ ತರಗತಿಗೆ ಪ್ರವೇಶಾತಿಗಾಗಿ ಸೂಚನೆಗಳು

## ಪ್ರಾಸ್ಪೆಕ್ಟಸ್‌ನ ಅನುಬಂಧ

**ವಿದ್ಯಾರ್ಹತೆ:**

ವಿದ್ಯಾಶಾಲೆಯು ಹುಡುಗರಿಗಾಗಿ 8 ರಿಂದ ಪಿಯುಸಿ ವರೆಗಿನ ತರಗತಿಗಳನ್ನು ಹೊಂದಿರುವ ಸಂಪೂರ್ಣ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜು. ಪ್ರವೇಶಗಳು 8ನೇ ತರಗತಿಗೆ ಮಾತ್ರ ತೆರೆದಿರುತ್ತದೆ. ಪುನರಾವರ್ತಿತ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ಇರುವುದಿಲ್ಲ. ಮುಂಗಡವಾಗಿ ಪ್ರವೇಶಾತಿಯನ್ನು ಮೀಸಲಾಗಿರಿಸಲು ಯಾವುದೇ ಅವಕಾಶವಿರುವುದಿಲ್ಲ.

**ಅರ್ಜಿ:**

1. ಅರ್ಜಿ ನಮೂನೆಗಳು ಎ ಮತ್ತು ಬಿ, ಶಾಲಾ ಶುಲ್ಕದ ವಿವರ (ಪ್ರಾಸ್ಪೆಕ್ಟಸ್‌ನ ಅನುಬಂಧ–ಸಿ) ಮತ್ತು ವಿಜ್ಞಾನ, ಗಣಿತ ಮತ್ತು ಸಾಮನ್ಯ ಇಂಗ್ಲೀಷ್‌ನಲ್ಲಿ ಪ್ರವೇಶ ಪರೀಕ್ಷೆಗಳಿಗೆ ಪಠ್ಯಕ್ರಮವನ್ನು ಪ್ರಾಸ್ಪೆಕ್ಟಸ್‌ನೊಂದಿಗೆ ನೀಡಲಾಗಿದೆ.
2. ಅರ್ಜಿಯನ್ನು ಸಲ್ಲಿಸುವಾಗ, ರೂ.350/– ನೊಂದಣಿ ಶುಲ್ಕವನ್ನು ನಗದು ಅಥವಾ ಬ್ಯಾಂಕ್ ಡ್ರಾಫ್ಟ್ (ಡಿಡಿ) ಮೂಲಕ ಪಾವತಿಸಬೇಕು. ಡಿಡಿಯ ಹಿಂಭಾಗದಲ್ಲಿ ಪ್ರಾಸ್ಪೆಕ್ಟಸ್‌ನ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸಬೇಕು. ಪೋಸ್ಟಲ್ ಆರ್ಡರ್‌ಗಳು, ಎಂ.ಓ ಮತ್ತು ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
3. ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ ಏಪ್ರಿಲ್ 9 ಆಗಿರುತ್ತದೆ. ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋವನ್ನು ಅರ್ಜಿಗೆ ಅಂಟಿಸಬೇಕು.
4. ಎಸ್.ಸಿ, ಎಸ್.ಟಿ, ಓಬಿಸಿ ಮುಂತಾದ ವಿವಿಧ ವರ್ಗಗಳ ಅಡಿಯಲ್ಲಿ ಅರ್ಜಿದಾರರು ಅರ್ಜಿ ಸಲ್ಲಿಸಿದ್ದಲ್ಲಿ ಅದಕ್ಕೆ ಸಂಬಂಧಿಸಿದ ಪ್ರಮಾಣಪತ್ರಗಳನ್ನು ಲಗತ್ತಿಸಬೇಕು. ಇಲ್ಲಿವಾದಲ್ಲಿ ಅಂತಹ ಅರ್ಜಿಗಳನ್ನು ಸಾಮಾನ್ಯ ವರ್ಗದ ಅರ್ಜಿಯೆಂದೇ ಪರಿಗಣಿಸಲಾಗುತ್ತದೆ.
5. 7ನೇ ತರಗತಿ ವಾರ್ಷಿಕ ಪರೀಕ್ಷೆಯ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಮತ್ತು 6 ಮತ್ತು 7ನೇ ತರಗತಿಯಲ್ಲಿನ ಪಠ್ಯೇತರ ಚಟುವಟಿಕೆಗಳ ಪ್ರಮಾಣಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. 7ನೇ ತರಗತಿಯ ಫಲಿತಾಂಶವು ಇನ್ನೂ ಪ್ರಕಟಿಸದಿದ್ದ ಸಂದರ್ಭದಲ್ಲಿ 7ನೇ ತರಗತಿ ಅರ್ಧವಾರ್ಷಿಕ ಪರೀಕ್ಷೆಯ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾಗುತ್ತದೆ ಹಾಗೂ ವಾರ್ಷಿಕ ಪರೀಕ್ಷೆಯ ಅಂಕಪಟ್ಟಿಯನ್ನು ಸಂದರ್ಶನದ ಸಮಯದಲ್ಲಿ ನೀಡಬೇಕಾಗುತ್ತದೆ.

**ಪಠ್ಯಕ್ರಮ:**

ನಮ್ಮ ಸಂಸ್ಥೆಯು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯು ಸೂಚಿಸಿದ ಪಠ್ಯಕ್ರಮವನ್ನು ಮತ್ತು ಪರೀಕ್ಷಾ ವಿಧಾನಗಳನ್ನು ಅನುಸರಿಸುತ್ತದೆ. ಬೋಧನೆಯ ಮಾಧ್ಯಮ ಇಂಗ್ಲೀಷ್ ಆಗಿದೆ. ಸಂಸ್ಕೃತ/ಕನ್ನಡ/ಹಿಂದಿಯನ್ನು ಪ್ರಥಮ ಭಾಷೆಯ ಅಡಿಯಲ್ಲಿ ಆಯ್ಕೆಗಾಗಿ ಒದಗಿಸಿದೆ. ಕನ್ನಡವನ್ನು ಪ್ರಥಮ ಅಥವಾ ತೃತೀಯ ಭಾಷೆಯಾಗಿ ಕಲಿಯುವುದು ಎಲ್ಲರಿಗೂ ಕಡ್ಡಾಯವಾಗಿರುತ್ತದೆ. ಆದರೆ ಕನ್ನಡ ಕಲಿಯದವರಿಗೆ ಕನ್ನಡವನ್ನು ಕಲಿಸಲಾಗುವುದು. ಕರ್ನಾಟಕೇತರ ವಿದ್ಯಾರ್ಥಿಗಳು ಹಿಂದಿ ಅಥವಾ ಸಂಸ್ಕೃತವನ್ನು ಓದಲು ಮತ್ತು ಬರೆಯಲು ಅರ್ಹರಿರಬೇಕು; ಏಕೆಂದರೆ ಅವರು ಅವುಗಳಲ್ಲಿ ಒಂದನ್ನು ಮೊದಲ ಭಾಷೆಯಾಗಿ ಆರಿಸಿಕೊಳ್ಳಬೇಕಾಗುತ್ತದೆ.

**ಪ್ರವೇಶಾತಿ ವಿಧಾನ:**

1. ಪ್ರವೇಶಾತಿಯನ್ನು 7ನೇ ತರಗತಿಯ ಮಟ್ಟದ ವಿಜ್ಞಾನ ಮತ್ತು ಗಣಿತದ ಜೊತೆಗೆ ಸಾಮಾನ್ಯ ಇಂಗ್ಲೀಷ್ ಲಿಖಿತ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಮತ್ತು ಸಂದರ್ಶಗಳ ಆಧಾರದ ಮೇಲೆ ನಿರ್ಧರಿಸಲಾಗುವುದು. ಅದಕ್ಕಾಗಿ ಪಠ್ಯಕ್ರಮವನ್ನು ಪ್ರಾಸ್ಪೆಕ್ಟಸ್‌ನೊಂದಿಗೆ ಒದಗಿಸಲಾಗಿದೆ. ಅಭ್ಯರ್ಥಿಗಳು ಇಂಗ್ಲೀಷ್ ಅಥವಾ ಕನ್ನಡ ಮಾಧ್ಯಮದಲ್ಲಿ ಪ್ರವೇಶ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು.
2. ಪ್ರವೇಶ ಪರೀಕ್ಷೆಗಳು ಏಪ್ರಿಲ್ 17 ಮತ್ತು 21 ರ ನಡುವೆ ವಿವಿಧ ಬ್ಯಾಚ್‌ಗಳಲ್ಲಿ ನಡೆಯುತ್ತದೆ – ಬೆಳಗಿನ ಬ್ಯಾಚ್ ಬೆಳಿಗ್ಗೆ 7.30 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಮತ್ತು ಮಧ್ಯಾಹ್ನದ ಬ್ಯಾಚ್ ಮಧ್ಯಾಹ್ನ 12.30 ರಿಂದ ಸಂಜೆ 6.00

ಗಂಟೆಯವರೆಗೆ. ಅಭ್ಯರ್ಥಿಗೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯವನ್ನು ಭರ್ತಿ ಮಾಡಿದ ಅರ್ಜಿಯನ್ನು ನೊಂದಣಿ ಮಾಡಿಸಿ ಸ್ವೀಕೃತಿ ಪಡೆದ ಸಂದರ್ಭದಲ್ಲಿ ತಿಳೀಸಲಾಗುವುದು.

3. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಏಪ್ರಿಲ್ 22ರಂದು ಸಂಜೆ 5.30 ಗಂಟೆಯ ಸುಮಾರಿಗೆ ಪ್ರಕಟಿಸಲಾಗುವುದು. ಮೊದಲ ಕಂತಿನ ಶುಲ್ಕಷನ್ನು ಏಪ್ರಿಲ್ 30ರ ಮೊದಲು ಆಯ್ಕೆಯಾದ ವಿದ್ಯಾರ್ಥಿಗಳು ಪಾವತಿಸಬೇಕು. ಇಲ್ಲದಿದ್ದಲ್ಲಿ ಪ್ರವೇಶಾತಿಯು ರದ್ದಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿಗಳು ಎಂಡಾರ್ಸ್‌ಮೆಂಟ್‌ನಲ್ಲಿ (ಆಯ್ಕೆಯಾದ ಅಭ್ಯರ್ಥಿಗಳಿಗೆ ನೀಡಲಾಗುವುದು) ನಿಗದಿಪಡಿಸಿದ ಸಮಯ ಮತ್ತು ದಿನಾಂಕದಂದು ಜೂನ್ 2 ರಿಂದ 4 ರ ನಡುವೆ ಶಾಲೆಗೆ ಹಾಜರಾಗಬೇಕು.
4. ಪರೀಕ್ಷೆಯ ದಿನದಂದು ಅಭ್ಯರ್ಥಿಗಳಿಗೆ ಊಟ/ಉಪಹಾರವನ್ನು ಒದಗಿಸಲಾಗುವುದು.

**ವಾರ್ಷಿಕ ಶುಲ್ಕದ ವಿವರ:**

ವಸತಿ ಮತ್ತು ಇತರ ಶುಲ್ಕಗಳು ಸೇರಿದಂತೆ ವಾರ್ಷಿಕ ಶುಲ್ಕಗಳು ಸುಮಾರು ರೂ.1,50,000/- ಆಗಿರುತ್ತದೆ ಮತ್ತು 3 ಕಂತುಗಳಲ್ಲಿ (ಏಪ್ರಿಲ್, ಜುಲೈ ಮತ್ತು ಸೆಪ್ಟಂಬರ್) ಪಾವತಿಬೇಕಾಗುತ್ತದೆ. ಠೇವಣಿ ಹಣ ಹೆಚ್ಚುವರಿಯಾಗಿ ರೂ.30,000/- ಗಳನ್ನು ಕಟ್ಟಬೇಕು. ಪುಸ್ತಕಗಳು, ಲೇಖನ ಸಾಮಗ್ರಿಗಳು ಮತ್ತು ಶಾಲಾ ಮಾಹಿತಿ ಪುಸ್ತಕದ ಅನುಬಂಧ-ಎ ಮತ್ತು ಅನುಬಂಧ-ಬಿ ಯಲ್ಲಿ ನಮೂದಿಸಲಾದ ವಸ್ತುಗಳಿಗಾಗಿ ಈ ಠೇವಣಿ ಮೊತ್ತ ಭರಿಸಲಾಗುವುದು.

ವಿದ್ಯಾರ್ಥಿಯ ದಿನಚರಿಯು ಬೆಳಿಗ್ಗೆ 5.05ಕ್ಕೆ ಪ್ರಾರಂಭವಾಗುತ್ತದೆ ಮತ್ತು ರಾತ್ರಿ 10.30ಕ್ಕೆ ಮುಕ್ತಾಯವಾಗುತ್ತದೆ ಎಂದು ಪೋಷಕರು ಅಭ್ಯರ್ಥಿಗಳಿಗೆ ಮುಂಚಿತವಾಗಿ ತಿಳಿಸಬೇಕು. ಒಂದು ಬಾರಿ ಪ್ರವೇಶಾತಿ ಪಡೆದ ನಂತರ ಪ್ರವೇಶಾತಿ ಹಿಂಪಡೆಯುವುದನ್ನು ತಪ್ಪಿಸಲು ಪೋಷಕರು ಅಭ್ಯರ್ಥಿ ಮತ್ತು ಇತರೆ ಕುಟುಂಬದ ಸದಸ್ಯರ ಒಪ್ಪಿಗೆಯನ್ನು ಪಡೆದುಕೊಳ್ಳಲು ಈ ಮೂಲಕ ಸಲಹೆ ನೀಡುತ್ತೇವೆ.

**ವಿದ್ಯಾರ್ಥಿವೇತನ ಅರ್ಜಿದಾರರಿಗೆ ಮಾತ್ರ:**

ವಿದ್ಯಾಶಾಲೆಯ ವತಿಯಿಂದ ಅರ್ಹ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ ಕೆಲವೇ ವಿದ್ಯಾರ್ಥಿವೇತನಗಳು ಲಭ್ಯವಿದೆ. ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವವರು ವಿವರಗಳನ್ನು ಮತ್ತು ನಿಗದಿತ ವಿದ್ಯಾರ್ಥಿವೇತನ ಅರ್ಜಿ ನಮೂನೆಯನ್ನು ಪ್ರಾಸ್ಪೆಕ್ಟಸ್‌ನೊಂದಿಗೆ ಪಡೆದುಕೊಳ್ಳಬೇಕು. ಸರಿಯಾದ ನಮೂನೆಗಳಲ್ಲಿ ಭರ್ತಿ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಪ್ರಾಸ್ಪೆಕ್ಟಸ್‌ನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡುವುದು ಅನಗತ್ಯ ಪತ್ರವ್ಯವಹಾರವನ್ನು ತಪ್ಪಿಸುತ್ತದೆ.

ಎಲ್ಲಾ ಪತ್ರ ವ್ಯವಹಾರವನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕು

**ಕರೆಸ್ಪಾಂಡೆಟ್, ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಯಾದವಗಿರಿ, ಮೈಸೂರು – 570020**

**ಕರೆಸ್ಪಾಂಡೆಂಟ್**